ಎದೆ ಬಿರಿಯುವ ಹಾಗೆ ಜೋರಾಗಿ ಅತ್ತ. ಆ ಕತೆಯನ್ನು ನಾನು ಬರೆದಿಲ್ಲ, ನನ್ನದಲ್ಲದ ಕತೆಯನ್ನ ನನ್ನದು ಅಂತ ಭಾವಿಸಿ ಹೊಗಳುವಾಗ ನಾನು ಗಂಡಸೇ ಅಲ್ಲ ಅಂತ ಎಲ್ಲರೂ ಕೂಗುವಂತೆ ಅನ್ನಿಸುತ್ತದೆ ಅಂತ ಗೋಗರೆದ.

ನನ್ನ ಮೈಮೇಲೆ ಮುಳ್ಳುಗಳೆದ್ದವು. ಅವನ ಕೈಯನ್ನು ಜೋರಾಗಿ ಅದುಮಿ ಹಿಡಿದುಕೊಂಡೆ. ಆ ಕತೆ ನಿನ್ನದಲ್ಲ ಅಂದರೆ ಮತ್ಯಾರದು ಅಂತ ಗಟ್ಟಿಯಾಗಿ ಕೂಗಿದೆ, ಆವರೆಗೆ ಏರದೇ ಇದ್ದ ಧ್ವನಿ ಇದ್ದಕ್ಕಿದ್ದಂತೇ ಏರಿದ್ದು ಕಂಡು ಅವನು ಕಂಗಾಲಾದ. ಯಾರಿಗೂ ಹೇಳಬೇಡ, ಅದು... ಅದು ಸುರಭೀದು ಅಂತ ಮೆತ್ತಗೆ ಹೇಳಿದ. ನಾನೇನು ಕೇಳಿಸಿಕೊಂಡೆ ಅಂತ ಅರ್ಥ ಮಾಡಿಕೊಳ್ಳಲು ನನಗೆ ಕೆಲ ಕಾಲ ಹಿಡಿಯಿತು. ನನ್ನ ಕತೆಗಳ ಮಧ್ಯೆ ತನ್ನ ಒಂದು ಕತೆಯನ್ನು ಇಟ್ಟು ಕೊಟ್ಟಳು, ಚೆನ್ನಾಗೇ ಇತ್ತು, ನಿನ್ನ ಸಂಕಲನಕ್ಕೆ ಚೆನ್ನಾಗಿರುತ್ತೆ ಅಂತ ಹೇಳಿದಳು. ಬೇಡ ಅಂದೆ, ಕೇಳಲಿಲ್ಲ; ಹಟ ಮಾಡಿದಳು. ಅವಳಿಗೆ ಬೇಸರ ಮಾಡಲು ಇಷ್ಟವಾಗಲಿಲ್ಲ, ಕಡೆಯಲ್ಲಿ ಸೇರಿಸಿದೆ ಅಂತೆಲ್ಲಾ ಹೇಳುತ್ತಾ ವಿಶ್ವ ಮುಖ ಸಪ್ಪಗೆ ಮಾಡಿದ.

ಯಾರಾದರೂ ಆ ಕತೆ ಹೊಗಳಿ ಮಾತಾಡಿದರೆ ಮಾತಲ್ಲೇ ನನಗೇ ತಿವಿದಂತಾಗುತ್ತದೆ. ನೀನೊಬ್ಬ ಆ ಕತೆಯ ಬಗ್ಗೆ ಮಾತಾಡಲಿಲ್ಲ, ಅದೇ ನನಗೆ ತುಂಬ ದೊಡ್ಡ ಸಮಾಧಾನ. ಆದರೂ ನೀನೂ ಯಾವತ್ತು ಆ ಕತೆಯ ಬಗ್ಗೆ ಕೇಳಿಬಿಡುತ್ತೀಯೋ ಅಂತ ಭಯವಾಗುತ್ತೆ ಅಂತ ಬಿಕ್ಕಿದ. ಒಬ್ಬ ಕತೆಗಾರನಾಗಿ ಕತೆಗಳನ್ನು ಕತೆಗಾರನಿಗೆ ಆರೋಪಿಸಬಾರದು ಅಂತ ಗೊತ್ತು, ಆದರೂ ಗೊತ್ತಿಲ್ಲ. ಯಾಕೋ ಆ ಕತೆ ಓದುತ್ತಿದ್ದರೆ ಇದು ಅವಳದೇ ಕತೆಯೇನೋ ಅಂತ ಅನ್ನಿಸೋಕೆ ಶುರುವಾಗಿದೆ ಅಂದ. ಪ್ರಶ್ನೆ ಕೇಳಿದ್ದು ಎಲ್ಲಿ ತಪ್ಪಾಯ್ತೋ ಎನ್ನುವಂತೆ ನನ್ನನ್ನೇ ದಿಟ್ಟಿಸಿ ನೋಡಿದ.

ಹಾಗೆ ನನ್ನನ್ನೇ ನೋಡುವುದು ಎಷ್ಟು ಅರ್ಥಗರ್ಭಿತ ಮತ್ತು ಎಷ್ಟು ಅವಮಾನಕಾರಿ!

ಇಷ್ಟು ವರ್ಷಗಳ ನಮ್ಮ ಸಂಬಂಧವನ್ನೇ ಅವಮಾನಿಸುತ್ತಿದ್ದೇನೆ ಅಂತ ಗೊತ್ತು, ಆದರೂ ರಾತ್ರಿಯೆಲ್ಲಾ ಅನುಮಾನವಾಗುತ್ತದೆ ಮಾರಾಯಾ. ಪ್ರಶಸ್ತಿ ತಗೊಳ್ಳೋಕೆ ನಾಡಿದ್ದು ದೆಹಲಿಗೆ ಹೋಗಬೇಕು, ಅಷ್ಟರೊಳಗೆ ಅದು ಸುರಭಿ ಕತೆ ಹೌದೋ, ಅಲ್ಲವೋ ಅಂತ ನನಗೆ ಗೊತ್ತಾಗಬೇಕು. ಆ ಕತೆಯ ಪಾತ್ರ ಸುರಭಿ ಅಲ್ಲ ಅಂತ ಒಂದು ಸಲ ಹೇಳು, ನಿನ್ನ ನಂಬುತ್ತೇನೆ. ಆಮೇಲಿಂದ ಅನುಮಾನ ಪಡುವುದನ್ನೇ ಬಿಟ್ಟುಬಿಡುತ್ತೇನೆ ಅಂತ ಗೋಳಾಡತೊಡಗಿದ.

ಅವನನ್ನೇ ನೋಡುತ್ತಾ ನಾನು ಹಾಗೇ ನಿಶ್ಚಲನಾದೆ.

ಬೆಳಕನ್ನು ನುಂಗಿ ಬರುವ ರಾತ್ರಿ ನನ್ನನ್ನೂ ನುಂಗಬಾರದೇ ಅಂತ ಅನಿಸಿತು.

## ವಿಕಾಸ್ ನೇಗಿಲೋಣಿ

ಹುಟ್ಟಿದ್ದು ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕಿನ ನೇಗಿಲೋಣಿ. ವಿದ್ಯಾಭ್ಯಾಸ ಉಜಿರೆ ಮತ್ತು ಉಡುಪಿಗಳಲ್ಲಿ. ಸುಮಾರು 16 ವರ್ಷಗಳ ಕಾಲ ಪತ್ರಿಕೋದ್ಯಮದಲ್ಲಿ ಕಾರ್ಯ ನಿರ್ವಹಿಸಿದ ಅನುಭವ. ಹಲವು ಪತ್ರಿಕೆಗಳಲ್ಲಿ ವೃತ್ತಿ. ಪ್ರಸ್ತುತ ಕಲರ್ಸ್ ಕನ್ನಡ ವಾಹಿನಿಯ ಕಥಾ ವಿಭಾಗದಲ್ಲಿ ಕೆಲಸ. ಹಲವಾರು ಧಾರಾವಾಹಿಗಳಿಗೆ ಕತೆ, ಚಿತ್ರಕತೆ, ಸಂಭಾಷಣೆ, ಶೀರ್ಷಿಕೆ ಸಾಹಿತ್ಯ ಬರೆದಿರುವ ಅನುಭವ. 'ಮಳೆಗಾಲ ಬಂದು ಬಾಗಿಲು ತಟ್ಟಿತು', ಪ್ರಕಟಿತ ಕಥಾಸಂಕಲನ. 'ರಥಬೀದಿ ಎಕ್ಸ್ ಪ್ರೆಸ್', ಪ್ರಕಟಿತ ಅಡಲಸೆಂಟ್ ಆತ್ಮಚರಿತ್ರೆ.